# ಸಾರ್ಥಕ ಬದುಕು
# ಅಸಾಧಾರಣ ಸಾಧನೆ

**‘ಡಶೆನ್ (ಡ್ಯುಶೆನ್) ಮಸ್ಕ್ಯುಲಾರ್ ಡಿಸ್ಟ್ರೊಫಿ’ ದೈಹಿಕ ದೌರ್ಬಲ್ಯವನ್ನು ಉಂಟುಮಾಡುವ ಅಪರೂಪದ ಕಾಯಿಲೆ. ಈ ಕಾಯಿಲೆಗೆ ತುತ್ತಾದರೂ ಸಾರ್ಥಕ್ ಕಾಮತ್ ಅವರು ತಮ್ಮ ಅಸಾಧಾರಣ ಮನಸ್ಥೈರ್ಯದಿಂದ ವೈದ್ಯರಾಗಿ, ವೈದ್ಯಕೀಯ ಕ್ಷೇತ್ರದಲ್ಲಿ ಅಪರೂಪದ ಸಾಧನೆ ಮಾಡಿದ್ದಾರೆ.**

**■ ಡಾ. ವೀಣಾಭಾರತಿ**

‘ಆಗದು ಎಂದು, ಕೈಲಾಗದು ಎಂದು ಕೈಕಟ್ಟಿ ಕುಳಿತರೆ ಸಾಗದು ಕೆಲಸವು ಮುಂದೆ...’ – ಡಾ. ಸಾರ್ಥಕ್ ಕಾಮತ್ ಅವರನ್ನು ಭೇಟಿ ಮಾಡುವ ಜನ ಈ ಹಾಡನ್ನು ನೆನಪಿಸಿಕೊಳ್ಳದೇ ಇರಲಾರರು.

ಪ್ರಪಂಚದಾದ್ಯಂತ, ಹುಟ್ಟುವ ಪ್ರತಿ 3500 ಗಂಡುಮಕ್ಕಳಲ್ಲಿ ಒಂದು ಮಗುವಿಗೆ ಉಂಟಾಗಬಹುದಾದ ‘ಡಶೆನ್ (ಡ್ಯುಶೆನ್) ಮಸ್ಕ್ಯುಲಾರ್ ಡಿಸ್ಟ್ರೊಫಿ’ (ಡಿಎಂಡಿ – **Duchenne Muscular Dystrophy**) ಎಂಬ ಕಾಯಿಲೆಯಿಂದ ಡಾ. ಸಾರ್ಥಕ್ ಬಳಲುತ್ತಿದ್ದಾರೆ. ‘ಎಕ್ಸ್’ ಲಿಂಗ ಸಂಬಂಧಿ ಅಪ್ರಭಾವಿ ವರ್ಣತಂತುವಿನಿಂದ ಬರಬಹುದಾದ, ಆನುವಂಶೀಯ ಕಾಯಿಲೆ (**Sex linked x recessive chromosome**) ಇದು.

‘ಕ್ಯಾರಿಯರ್’ (ಕಾಯಿಲೆಯ ಜೀನ್ ಅಥವಾ ತಳಿ ಹೊಂದಿರುವ ವಾಹಕ) ತಾಯಿಯಿಂದ ಅಥವಾ ಮ್ಯುಟೇಶನ್ (ವಿಕೃತಿ ಹೊಂದಿದ) ಜೀವಕೋಶಗಳ ಕಾರಣದಿಂದ ಉಂಟಾಗುವ ‘ಡಶೆನ್ ಮಸ್ಕ್ಯುಲಾರ್ ಡಿಸ್ಟ್ರೊಫಿ’ ಕಾಯಿಲೆ, ಎಳೆ ವಯಸ್ಸಿನಿಂದಲೇ ಬಾಧಿತಗೊಂಡ ಮಕ್ಕಳಲ್ಲಿ ನಾನಾ ವಿಧದ ಮಾಂಸಖಂಡಗಳ ದೌರ್ಬಲ್ಯದ ರೂಪದಲ್ಲಿ ಪ್ರಕಟಗೊಳ್ಳತೊಡಗುತ್ತದೆ. ಎರಡು ಅಥವಾ ಮೂರು ವರ್ಷ ವಯಸ್ಸಿನ ಗಂಡುಮಗುವು ನಡಿಗೆ ಕಲಿತಿದ್ದರೂ ಕೂಡ, ಪದೇ ಪದೇ ಬೀಳಲು ಆರಂಭಿಸುತ್ತದೆ. ಕೆಲವೊಮ್ಮೆ ನಡೆಯಲು ಇಚ್ಛಿಸದೇ, ಮಂಡಿಗಳ ಮೇಲೆ ತೆವಳಲು (ಪುನಃ ಅಂಬೆಗಾಲಿಡಲು) ಪ್ರಾರಂಭಿಸುತ್ತದೆ.

‘ಹುಟ್ಟಿದಾಗ ಎಲ್ಲಾ ಮಕ್ಕಳಂತೆ ಸಾರ್ಥಕ್ ಆರೋಗ್ಯಕರವಾಗಿಯೇ ಇದ್ದ. ಅವನಿಗೆ ಮೂರು ವರ್ಷವಾಗುತ್ತಿದ್ದಂತೆ ನಡೆಯುವಾಗ ಇದ್ದಕ್ಕಿದ್ದಂತೆ ಬೀಳತೊಡಗಿದ. ಮೂರೂವರೆ ವರ್ಷದ ಮಗುವನ್ನು ಬೆಂಗಳೂರಿನ ‘ಸೇಂಟ್ ಮಾರ್ಥಾಸ್’ ಆಸ್ಪತ್ರೆಯ ಮಕ್ಕಳ ತಜ್ಞರಿಗೆ ತೋರಿಸಿದಾಗ, ಪ್ರಾಯಶಃ ಸಾರ್ಥಕ್‌ಗೆ ‘ಫ್ಲಾಟ್ ಫುಟ್’ (**Flat Foot**) ಇರಬಹುದೆಂದು ನಿರ್ಧರಿಸಿ, ‘ಸ್ಪೆಶಲ್ ಶೂಸ್’ಗಳನ್ನು ಹಾಕಿ, ನಡೆಸಲು ಸಲಹೆ ನೀಡಿದರು. ತಜ್ಞರ ಸಲಹೆ ಪಾಲಿಸಿದರೂ ಸಾರ್ಥಕ್‌ನ ನಡಿಗೆ ಸುಧಾರಿಸಲಿಲ್ಲ. ಆಗ, ಬೆಂಗಳೂರಿನ ನಿಮ್ಹಾನ್ಸ್ ಆಸ್ಪತ್ರೆಯಲ್ಲಿ ಸಿ.ಪಿ.ಕೆ. (ರಕ್ತದಲ್ಲಿನ ಕ್ರಿಯಾಟಿನಿನ್ ಕೈನೇಸ್ ಅಂಶವನ್ನು ಅಳೆಯುವುದು) ಹಾಗೂ ಜೆನಿಟಿಕ್ ಟೆಸ್ಟ್‌ಗಳನ್ನು ಮಾಡಿಸಲಾಯಿತು. ಆ ಪರೀಕ್ಷೆಗಳಲ್ಲಿ ‘ಡಶೆನ್ ಮಸ್ಕ್ಯುಲಾರ್ ಡಿಸ್ಟ್ರೊಫಿ’ ಇರುವುದು ತಿಳಿದು ಬಂತು’ ಎಂದು ಸಾರ್ಥಕ್ ಕಾಮತ್ ಅವರ ತಾಯಿ ರೇಖಾ ಕಾಮತ್ ಹೇಳುತ್ತಾರೆ.

ಒಂದು ದಶಕದ ಹಿಂದೆ ‘ಡಶೆನ್ ಮಸ್ಕ್ಯುಲಾರ್ ಡಿಸ್ಟ್ರೊಫಿ’ ಕಾಯಿಲೆಯಿಂದ ಬಳಲುತ್ತಿದ್ದ ಗಂಡುಮಕ್ಕಳು ಬದುಕುತ್ತಿದ್ದುದು 24 ಅಥವಾ 26 ವರ್ಷಗಳವರೆಗೆ ಮಾತ್ರ. ಏಕೆಂದರೆ ಕಾಯಿಲೆಯ ಕೊನೆಯ ಹಂತದಲ್ಲಿ ಶ್ವಾಸಕೋಶದ ಹಾಗೂ ಹೃದಯದ ಸ್ನಾಯುಗಳು ನಿರ್ಜೀವಗೊಂಡು ವ್ಯಕ್ತಿಯ ಮರಣಕ್ಕೆ ಕಾರಣವಾಗುತ್ತಿದ್ದವು. ಅದಕ್ಕೆ ಅಪವಾದ ಡಾ. ಸಾರ್ಥಕ್ ಅವರ ಸಾಧನೆ. ಈಗ 30 ವರ್ಷ ಆಗಿರುವ ಅವರದು ಅಸಾಧಾರಣ ದೃಢಮನಸ್ಸು ಹಾಗೂ ಅನುಕರಣೀಯ ಸಾಧನೆ.

ಸಾರ್ಥಕ್ ಅವರು ಓದುತ್ತಿದ್ದುದು ಬೆಂಗಳೂರಿನ ರಾಜಾಜಿನಗರದ ಶಾಲೆಯೊಂದರಲ್ಲಿ. 7ನೇ ತರಗತಿಗೆ ಬಂದಾಗ (12ನೇ ವಯಸ್ಸಿನಲ್ಲಿ) ಅವರಿಗೆ ಮಹಡಿಯ ಮೆಟ್ಟಿಲುಗಳನ್ನು ಹತ್ತಲಾಗುತ್ತಿರಲಿಲ್ಲ. ಗಾಲಿ ಕುರ್ಚಿಯನ್ನು ಉಪಯೋಗಿಸುವುದು ಅನಿವಾರ್ಯವಾಗಿತ್ತು. ‘ಕೇವಲ ಒಬ್ಬ ಹುಡುಗನ ಸಲುವಾಗಿ ನಾವು ತರಗತಿಯನ್ನು ಕೆಳಗಿನ ಕೊಠಡಿಯಲ್ಲಿ ನಡೆಸಲಾಗುವುದಿಲ್ಲ, ಟಿ.ಸಿ. ತೆಗೆದುಕೊಂಡು ಬೇರೆ ಶಾಲೆಗೆ ಸೇರಿಸಿ’ ಎಂದು ಸಾರ್ಥಕ್‌ರವರ ತಂದೆ–ತಾಯಿಗೆ ಶಾಲೆಯ ಪ್ರಿನ್ಸಿಪಾಲ್ ಹೇಳಿದರು. ಆಗ ನೆರವಿಗೆ ಬಂದುದು ನಂದಿನಿ ಲೇಔಟ್‌ನ ‘ಆಚಾರ್ಯ ಶ್ರೀ ಮಹಾಪ್ರಜ್ಞ’ ಶಾಲೆಯ ಆಗಿನ ಪ್ರಿನ್ಸಿಪಾಲ್ ಪಾರ್ವತಿ ವಿಶ್ವನಾಥನ್. ಅವರು ತಮ್ಮ ಸಹಾಯಹಸ್ತ ಚಾಚಿದರು. ಏಳನೇ ತರಗತಿಯಲ್ಲಿ ಓದುತ್ತಿದ್ದ ಎಲ್ಲಾ ಗಂಡು ಮಕ್ಕಳನ್ನೂ ಕೆಳಗಿನ ಕೊಠಡಿಗೆ



## ಏನಿದು ಡಶೆನ್ ಮಸ್ಕ್ಯುಲಾರ್ ಡಿಸ್ಟ್ರೊಫಿ?

ಡಶೆನ್ ಮಸ್ಕ್ಯುಲಾರ್ ಡಿಸ್ಟ್ರೊಫಿಯು ‘ಹಿಮೊಫೀಲಿಯಾ’ ಕಾಯಿಲೆಯಂತೆಯೇ ‘ಎಕ್ಸ್–ಲಿಂಕ್ಡ್ ರಿಸೆಸಿವ್ ಡಿಸಾರ್ಡರ್’ ಆಗಿರುತ್ತದೆ. ಗಂಡುಮಕ್ಕಳ ಜೀವಕೋಶಗಳಲ್ಲಿ ಒಂದೇ ಒಂದು ಎಕ್ಸ್ ವರ್ಣತಂತು ಇರುವುದರಿಂದ, (ಮತ್ತೊಂದು ವರ್ಣತಂತು ‘ವೈ’ ಆಗಿರುತ್ತದೆ) ತಾಯಿಯ ಕಡೆಯಿಂದ ಬರುವ ‘ಎಕ್ಸ್’ ವಾಹಕತಳಿ (ಜೀನ್ಸ್) ಅಥವಾ ಹೊಸದಾಗಿ ವಂಶವಾಹಿಗಳಲ್ಲಿ ಉದ್ಭವಿಸುವ